ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**272/2020.**

ದಿನಾಂಕಃ**17.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ರೋಹಿತ್ | ಚಾಸಾ-6,<br>ಪ್ರಾಸಾ-5 |
| ತಂದೆಯ ಹೆಸರು | ಕೃಷ್ಣಪ್ಪ | |
| ವಯಸ್ಸು | 45 | |
| ಉದ್ಯೋಗ | ಡಿಟಿಹೆಚ್ ಸರ್ವಿಸ್ | |
| ವಾಸ | ಕಡೂರು ಟೌನ್ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 7-8 ವರ್ಷಗಳ ಹಿಂದೆ ನಾನು ಡಿಸ್ ಕೆಲಸಕ್ಕೆಂದು ಚಾಸಾ 1 ರವರ ಮನೆಯ ಬೀದಿಗೆ ಅಂದರೆ ಕನ್ನಿಕಾಪರಮೇಶ್ವರ ದೇವಸ್ಥಾನ ರಸ್ತೆಗೆ ಹೋಗಿದ್ದಾಗ ಅಲ್ಲಿ ಚಾಸಾ 1 ರವರನ್ನು ನೋಡಿರುತ್ತೇನೆ. ಅಲ್ಲಿ ಒಬ್ಬರು ವಯಸ್ಸಾಗಿದ್ದ ಹೆಂಗಸು ಕೂಗಾಡುತ್ತಿದ್ದರು ನಾನು ಹೋಗಿ ನೋಡಿದಾಗ, ಒಂದು ಬೈಕಿನಲ್ಲಿ ಬಂದ ಇಬ್ಬರು ಹುಡುಗರು ಅವರ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಅಲ್ಲಿ ಜನರು ನೆರೆದಿದ್ದರು. ನಂತರ ಚಾಸಾ 1 ರವರನ್ನು ವಿಚಾರಿಸಿ ನೋಡಿದಾಗ ಅವರ ಕುತ್ತಿಗೆಗೆ ಗಾಯಗಳು ಆಗಿತ್ತು. ಸದರಿ ಸರ ಎಷ್ಟು ಗ್ರಾಂ ಇತ್ತು ನಾನು ಕೇಳಲು ಹೋಗಿಲ್ಲ, ಚಿನ್ನದ ಚೈನ್ ಕಿತ್ತುಕೊಂಡು ಹೋದರು ಎಂದು ಅಳುತ್ತಿದ್ದರು. ಸದರಿ ಘಟನೆಯಾದಾಗ ಸಂಜೆ ಸು.7 ರಿಂದ 7.30 ರ ಸಮಯವಾಗಿತ್ತು. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀಸವಾಲುಃ **1** ನೇ ಆರೋಪಿ ಪರ ಶ್ರೀ. ಎನ್ ಎಸ್ ವಕೀಲರಿಂದಃ

ಆ ದಿನ ಕೃತ್ಯವೆಸಗಿದ್ದನ್ನು ನಾನು ನೋಡಿರುತ್ತೇನೆ. ನಾನು ಕನ್ನಿಕಾ ಪರಮೇಶ್ವರ ದೇವಸ್ಥಾನ ಬೀದಿಯಲ್ಲಿ ಮನೆಯ ಮೇಲೆ ಅಂದರೆ ಶೆಟ್ಟರ ಮನೆಯ ಮೇಲೆ ಡಿಸ್ ಕೇಬಲ್ ಅಳವಡಿಸುತ್ತಿದ್ದಾಗ ಆರೋಪಿತರು ಸರ ಕಿತ್ತುಕೊಂಡು ಪರಾರಿಯಾಗಿದ್ದನ್ನು ನಾನು ನೋಡಿರುತ್ತೇನೆ. ಆರೋಪಿತರ ಪೈಕಿ ಒಬ್ಬ ಹೆಲ್ಮೆಟ್ ಧರಿಸಿದ್ದ ಮುಖ ಕಾಣಿಸಿರುವುದಿಲ್ಲ, ಇನ್ನೊಬ್ಬ ನನ್ನು ನಾನು ನೋಡಿರುತ್ತೇನೆ, ಆತನನ್ನು ನೋಡಿದಲ್ಲಿ ಗುರುತಿಸುತ್ತೇನೆ. ಈ ಕೃತ್ಯವು ಸು.7-8 ವರ್ಷಗಳ ಹಿಂದೆ ಆಗಿರುತ್ತದೆ. ನಾನು ನನ್ನ ಹೇಳಿಕೆಯಲ್ಲಿ ಒಬ್ಬ

ಹೆಲ್ಮೆಟ್ ಹಾಕಿದ್ದ ಇನ್ನೊರ್ವ ಹೆಲ್ಮೆಟ್ ಹಾಕಿರಲಿಲ್ಲ ಎಂದು ಹೇಳಿಕೆ ನೀಡಿರುತ್ತೇನೆ. ಕತ್ತಲೆಯಾಗಿದ್ದರಿಂದ ಯಾರು ಕಿತ್ತುಕೊಂಡರು ಎಂದು ಮುಖ ನೋಡಲಾಗಲಿಲ್ಲ ಎಂದು ನಾನು ಹೇಳಿಕೆ ನೀಡಿರುವುದಿಲ್ಲ. ಶೆಟ್ಟರ್ ಮನೆಯ ಮೇಲೆ ಡಿಸ್ ಅಳವಡಿಸುತ್ತಿದ್ದೆ ಎಂದು ನಾನು ಹೇಳಿಕೆ ನೀಡಿರುತ್ತೇನೆ. ನಾನು ನನ್ನ ಮನೆಯಲ್ಲಿದ್ದಾಗ ಯಾರೋ ಹೆಂಗಸು ಕಳ್ಳ ಕಳ್ಳ ಎಂದು ಕೂಗಾಡುತ್ತಿರುವುದು ಕೇಳಿಸಿತು ಎಂದು ಹೇಳಿಕೆ ನೀಡಿರುವುದಿಲ್ಲ. ಚಾಸಾ 1 ನನಗೆ ಪರಿಚಯಸ್ತರಲ್ಲ. ನಾನು ಪೊಲೀಸರಿಗೆ ಚಾಸಾ 1 ರವರು ಪರಿಚಯಸ್ತರು ಎಂದು ಹೇಳಿಕೆ ನೀಡಿರುವುದಿಲ್ಲ. ನನಗೆ ಘಟನೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ **2** ನೇ ಆರೋಪಿ ಪರ ಶ್ರೀ**.** ಕೆ ಎಸ್ ಆರ್ ವಕೀಲರಿಂದಃ</u>

ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ಸು.20 ವರ್ಷದಿಂದ ಡಿಸ್ ಕೆಲಸ ಮಾಡುತ್ತಿದ್ದೇನೆ. ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಮುಂದಿನ ರಸ್ತೆಯಲ್ಲಿ ಲಕ್ಷ್ಮೀ ಆಸ್ಪತ್ರೆ ಇದೆ ಎಂದರೆ ಸರಿ. ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಸ್ಥಳ ಮೂರು ರಸ್ತೆಗಳು ಕೂಡುವ ಸ್ಥಳ ಎಂದರೆ ಸರಿ. ಅಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ನಾನು ಇದ್ದ ಸ್ಥಳನಿದಿಂದ ಘಟನೆಯಾಗಿದೆ ಎಂದು ಹೇಳುವ ಸ್ಥಳಕ್ಕೆ ಸು.50–100 ಮೀ ಅಂತರವಿತ್ತು. ಆ ಸಮಯದಲ್ಲಿ ಕತ್ತಲೆ ಇತ್ತು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆಯುಂಟು ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಶ್ರೀ**.** ಕೆ ಎಸ್ ಆರ್ ವಕೀಲರು ತಮ್ಮ ಪರವಾಗಿನ ಮುಂದುವರೆದ ಪಾಟೀ ಸವಾಲನ್ನಾಗಿ ಈ ಮೇಲೆ ಶ್ರೀ ಎನ್ ಎಸ್ ವಕೀಲರು ಮಂಡಿಸಿರು ಪಾಟೀ ಸವಾಲನ್ನು ಅನುಮೋದಿಸುವಂತೆ ಕೋರಿರುತ್ತಾರೆ**.** ವಕೀಲರ ಮನವಿಯನ್ನು ಪುರಸ್ಕರಿಸಲಾಗಿರುತ್ತದೆ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.